**ಜಾಹೀರಾತು ಸಂಖ್ಯೆ: 01/2010 ರಲ್ಲಿನ**
**: ನಿರ್ವಾಹಕ ಹುದ್ದೆಗೆ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ವಿಧಾನ :**

1. ನೊಂದಣಿ ಸಂಖ್ಯೆ : [ಸ್ವಯಂಚಾಲಿತವಾಗಿರುತ್ತದೆ]
2. ಹೆಸರು : ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ನಿಮ್ಮ ಹೆಸರನ್ನು ಭರ್ತಿ ಮಾಡಬೇಕು. [ನಿಮ್ಮ ಇನಿಷಿಯಲ್ ಕೊನೆಗೆ ಅಂದರೆ ಹೆಸರಿನ ನಂತರ ಬರುವಂತೆ ತುಂಬಿರಿ.]
3. ತಂದೆಯ ಹೆಸರು : ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ನಿಮ್ಮ ತಂದೆಯ ಹೆಸರನ್ನು ಭರ್ತಿ ಮಾಡಬೇಕು
4. ಲಿಂಗ : ನೀವು ಮಹಿಳೆಯೋ ಅಥವಾ ಪುರುಷ ಎಂಬ ಬಗ್ಗೆ ಲಿಂಗವನ್ನು ಗುರುತಿಸಬೇಕು.
5. ಜನ್ಮ ದಿನಾಂಕ:ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ವರ್ಗಾವಣೆಯ ಪ್ರಮಾಣ ಪತ್ರ / ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗದಲ್ಲಿ ನಮೂದಿಸಿರುವ ನಿಮ್ಮ ಜನ್ಮ ದಿನಾಂಕವನ್ನು ಭರ್ತಿ ಮಾಡಬೇಕು.
6. ವಿಳಾಸ : ನಿಮ್ಮ ಸಂಪೂರ್ಣ ಅಂಚೆ ವಿಳಾಸ (ಪಿನ್‌ಕೋಡ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ)
7. ವಿದ್ಯಾರ್ಹತೆ : ಪಿಯುಸಿ / ಜೆಓಡಿಸಿ / ಜೆಎಲ್‌ಸಿ / ಇತರೆ : ನೀವು ಯಾವ ವಿದ್ಯಾರ್ಹತೆ ಹೊಂದಿರುತ್ತೀರಿ ಎಂಬ ಬಗ್ಗೆ ನಮೂದಿಸಬೇಕು.
8. ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ವಿವರಗಳನ್ನು ನಮೂದಿಸುವ ಬಗ್ಗೆ:

   (i) ಅಭ್ಯರ್ಥಿಯು ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿದ್ದಲ್ಲಿ ಅಂತಿಮ ವರ್ಷದ ಪರೀಕ್ಷೆಯಲ್ಲಿನ ಅಂಕಗಳನ್ನು ಈ ಕೆಳಕಂಡಂತೆ ನಮೂದಿಸುವುದು. ಉದಾ:ಅಂತಿಮ ಪಿ.ಯು.ಸಿ. ಪರೀಕ್ಷೆಯಲ್ಲಿ ಒಟ್ಟು 600 ಅಂಕಗಳಿಗೆ 450 ಅಂಕಗಳನ್ನು ಪಡೆದಿದ್ದರೆ ಹಾಗೂ 01/05/2009 ರಂದು ಉತ್ತೀರ್ಣರಾಗಿದ್ದಲ್ಲಿ ಈ ಕೆಳಗಿನಂತೆ ನಮೂದಿಸತಕ್ಕದ್ದು.

| ಗರಿಷ್ಠ ಅಂಕಗಳು | ಗಳಿಸಿರುವ ಅಂಕಗಳು | ತೇರ್ಗಡೆಯಾದ ವರ್ಷ |
|---|---|---|
| 0600 | 0450 | 2009 |

(ii) ಜೆ.ಓ.ಡಿ.ಸಿ ಮತ್ತು ಜೆ.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅಂಕಗಳನ್ನು ನಮೂದಿಸುವ ಬಗ್ಗೆ.

| | |
|---|---|
| 2004–05ನೇ ಸಾಲಿಗಿಂತ ಮುಂಚೆ ಜೆ.ಓ.ಸಿ ಪರೀಕ್ಷೆ ತೇರ್ಗಡೆಯಾದ ಅಭ್ಯರ್ಥಿಗಳು | ಜೆ.ಓ.ಸಿ. ಪರೀಕ್ಷೆಯ ಎರಡನೇ ಸೆಮಿಸ್ಟರ್ ಐಚ್ಛಿಕ ವಿಷಯಗಳು ಮತ್ತು ನಾಲ್ಕನೇ ಸೆಮಿಸ್ಟರ್‌ನ ಭಾಷಾ ವಿಷಯಗಳು ಮತ್ತು ಐಚ್ಛಿಕ ವಿಷಯಗಳ ಗರಿಷ್ಠ ಅಂಕಗಳು ಹಾಗೂ ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |
| 2004–05ನೇ ಸಾಲು ಮತ್ತು ನಂತರ ಜೆ.ಓ.ಸಿ. ಪರೀಕ್ಷೆ ತೇರ್ಗಡೆಯಾದ ಅಭ್ಯರ್ಥಿಗಳು | ಜೆ.ಓ.ಸಿ. ಪರೀಕ್ಷೆಯ ನಾಲ್ಕನೇ ಸೆಮಿಸ್ಟರ್ ಐಚ್ಛಿಕ ವಿಷಯಗಳ ಮತ್ತು ಭಾಷಾ ವಿಷಯಗಳ ಗರಿಷ್ಠ ಅಂಕಗಳು ಹಾಗೂ ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |
| ಪಿ.ಯು.ಸಿ ಪರೀಕ್ಷೆಯಲ್ಲಿ ಪಾಸಾದ ನಂತರ ಜೆ.ಓ.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು | ಪಿ.ಯು.ಸಿ ಎರಡನೇ ವರ್ಷದ ಪರೀಕ್ಷೆಯಲ್ಲಿ ಪಾಸಾದ ನಂತರ ಜೆ.ಓ.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಜೆ.ಓ.ಸಿ.ಯಲ್ಲಿ ಭಾಷಾ ಜ್ಞಾನದ ವಿನಾಯಿತಿ ಪಡೆದಿದ್ದಲ್ಲಿ ಪಿ.ಯು.ಸಿ ಎರಡನೇ ವರ್ಷದ ಪರೀಕ್ಷೆಯ ಭಾಷಾ ವಿಷಯಗಳಿಗೆ ನಿಗಧಿಪಡಿಸಿದ ಗರಿಷ್ಠ ಅಂಕಗಳು ಮತ್ತು ಪಡೆದ ಒಟ್ಟು ಅಂಕಗಳನ್ನು ಜೆ.ಓ.ಸಿ ಪರೀಕ್ಷೆಯ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್‌ನ ಐಚ್ಛಿಕ ವಿಷಯಗಳ ಗರಿಷ್ಠ ಹಾಗೂ ಪಡೆದ ಅಂಕಗಳಿಗೆ ಸೇರಿಸಿ ನಮೂದಿಸಬೇಕು. |
| ಜೆ.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು | ಒಂದನೇ ಮತ್ತು ಎರಡನೇ ವರ್ಷದ ಒಟ್ಟು ಅಂಕಗಳು ಮತ್ತು ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |

9. ಮೀಸಲಾತಿ:

| | |
|---|---|
| ಮಾಜಿ ಸೈನಿಕ / ಗ್ರಾಮೀಣ ಅಭ್ಯರ್ಥಿಯೇ / ಕನ್ನಡ ಮಾಧ್ಯಮ / ಇಲಾಖಾ ಅಭ್ಯರ್ಥಿಯೇ / ಯೋಜನಾ ನಿರಾಶ್ರಿತರೇ/ ಗೃಹ ರಕ್ಷಕ ದಳ | ನೀವು ಯಾವ ಮೀಸಲಾತಿಗಳನ್ನು ಕೋರುತ್ತೀರಿ ಎಂಬ ಬಗ್ಗೆ ನಿಗದಿತ ವೃತ್ತದಲ್ಲಿ ಗುರುತಿಸಬೇಕು. |

[ಗೃಹ ರಕ್ಷಕ ದಳ ಮೀಸಲಾತಿ ಕುರಿತು ಃ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಯಾವುದೇ ನಾಲ್ಕು ಸಂಸ್ಥೆಗಳಲ್ಲಿ ಕನಿಷ್ಠ 3 ವರ್ಷಗಳ ಕಾಲ ಚಾಲಕ, ನಿರ್ವಾಹಕ ಅಥವಾ ಚಾಲಕ-ವ-ನಿರ್ವಾಹಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು. ಇಂತಹ ಅಭ್ಯರ್ಥಿಗಳು ಅವರು ಕರ್ತವ್ಯ ನಿರ್ವಹಿಸಿರುವ ಪ್ರತಿ ಒಂದು ವರ್ಷದ ಸೇವಾವಧಿಗೆ ಒಂದು ವರ್ಷ ವಯೋಮಿತಿಯ ರಿಯಾಯಿತಿಗೆ ಅರ್ಹರು. ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು ಹಾಗೂ ನಿರ್ವಾಹಕ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಪಡೆದಿರುವ ಶೇಕಡಾವಾರು ಅಂಕಗಳಿಗೆ ಪ್ರತಿ ಒಂದು ವರ್ಷ ಸೇವೆ ಪೂರ್ಣಗೊಳಿಸಿರುವುದಕ್ಕೆ ಒಂದು ಅಂಕವನ್ನು ಕೃಪಾಂಕವನ್ನಾಗಿ ನೀಡಲಾಗುವುದು. ಈ ರಿಯಾಯಿತಿಯನ್ನು ಕೋರ ಬಯಸುವ ಗೃಹ ರಕ್ಷಕ ದಳದ ಅಭ್ಯರ್ಥಿಗಳು ಚಾಲಕ, ನಿರ್ವಾಹಕ ಅಥವಾ ಚಾಲಕ-ವ-ನಿರ್ವಾಹಕ ಹುದ್ದೆಯಲ್ಲಿ ಯಾವ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುವರೋ ಸದರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಯವರಿಂದ ಈ ರೀತಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಸೇವಾ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗಾಗಿ ಹೊಂದಿರಬೇಕು]

**ಸೂಚನೆ :** ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ ಅರ್ಜಿ ಶುಲ್ಕದಲ್ಲಿ ಮಾತ್ರ ರಿಯಾಯಿತಿ ನೀಡಲಾಗುವುದು. ಈ ರಿಯಾಯತಿ ಪಡೆಯುವ ಅಭ್ಯರ್ಥಿಗಳು ನಿಗದಿತ ವೃತ್ತದಲ್ಲಿ ಹೌದು ಎಂದು ಗುರುತಿಸುವುದು.

10. ಪ್ರವರ್ಗ ಃ

| | |
|---|---|
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ /ಪ್ರವರ್ಗ-1 / 2ಎ / 2ಬಿ / 3ಎ / 3ಬಿ /ಸಾಮಾನ್ಯ ವರ್ಗ | ನೀವು ಯಾವ ವರ್ಗಕ್ಕೆ ಸೇರಿರುತ್ತೀರಿ ಎಂಬ ಬಗ್ಗೆ ಸಂಬಂಧಪಟ್ಟ ವರ್ಗವನ್ನು ಗುರುತಿಸಬೇಕು. |

11. ನಿರ್ವಾಹಕ ಪರವಾನಗಿ ಮಾಹಿತಿ ಃ ಚಾಲ್ತಿಯಲ್ಲಿರುವ ನಿರ್ವಾಹಕ ಪರವಾನಗಿ ಹಾಗೂ ಕರ್ನಾಟಕ ಬ್ಯಾಡ್ಜ್‌ನ್ನು ಹೊಂದಿದ್ದಲ್ಲಿ ಹೌದು ಎಂದು ನಮೂದಿಸಿ.

12. ದೇಹದಾರ್ಢ್ಯತೆ ಃ ನಿಮ್ಮ ನಿಗದಿತ ಎತ್ತರ ಸೆಂ.ಮೀ.ಗಳಲ್ಲಿ ನಿಗದಿತ ಬಾಕ್ಸ್‌ನಲ್ಲಿ ನಮೂದಿಸತಕ್ಕದ್ದು

13. ನೀವು ಈ ಹಿಂದೆ ಸರ್ಕಾರದ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಯಿಂದ ವಜಾ ಮಾಡಲ್ಪಟ್ಟಿದ್ದರೆ/ತೆಗೆದುಹಾಕಲ್ಪಟ್ಟಿದ್ದಲ್ಲಿ ಮಾತ್ರ ಸಂಬಂಧಪಟ್ಟ ವೃತ್ತದಲ್ಲಿ ಹೌದು ಎಂದು ಗುರುತಿಸುವುದು ಅಥವಾ ಇಲ್ಲವಾದಲ್ಲಿ ಇಲ್ಲಾ ಎಂದು ಗುರುತಿಸುವುದು.

**14. ಶುಲ್ಕ ಪಾವತಿ ವಿವರ :**

ಅಭ್ಯರ್ಥಿಗಳು ಅರ್ಜಿಶುಲ್ಕವನ್ನು ಪಾವತಿ ಮಾಡುವ ಕುರಿತು ಈ ಕೆಳಗಿನ ನಿರ್ದೇಶನಗಳನ್ನು ತಪ್ಪದೇ ಪಾಲಿಸತಕ್ಕದ್ದು.

ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ಪ್ರತಿಯನ್ನು ಮುದ್ರಿಸಿಕೊಳ್ಳುವ ಮೊದಲು ಬ್ಯಾಂಕ್ ಚಲನ ಪ್ರತಿಯನ್ನು ಕಡ್ಡಾಯವಾಗಿ ಮುದ್ರಿಸಿಕೊಳ್ಳಬೇಕಾಗುತ್ತದೆ. ಈ ರೀತಿಯಲ್ಲಿ ಮುದ್ರಿತವಾದ ಬ್ಯಾಂಕ್ ಚಲನಿನ 3 ಪ್ರತಿಗಳಲ್ಲಿಯೂ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸಿದ ವಿವರಗಳ ಅನುಸಾರ ಸಂಬಂಧಿಸಿದ ಮಾಹಿತಿಗಳು ಸ್ವಯಂ ಮುದ್ರಿತವಾಗಿರುತ್ತದೆ. ಅಭ್ಯರ್ಥಿಯು ಮುದ್ರಿತ 3 ಚಲನಗಳ ಮೇಲೆ ತನ್ನ ಸಹಿಯನ್ನು ದಾಖಲಿಸಿ, ಈ ಕೆಳಗೆ ನಮೂದಿಸಿರುವ ಅರ್ಜಿ ಶುಲ್ಕವನ್ನು ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ "ಕಾರ್ಪೋರೇಷನ್ ಬ್ಯಾಂಕ್" (Corporation Bank ) ಶಾಖೆಯಲ್ಲಿ ಮಾತ್ರ ಪಾವತಿಸಬೇಕು. ಬ್ಯಾಂಕ್ ದೃಢೀಕರಿಸಿದ ಪ್ರತಿಗಳಲ್ಲಿ 1 ಪ್ರತಿಯನ್ನು ಬ್ಯಾಂಕಿನಲ್ಲಿ ಹಾಗೂ ಇನ್ನುಳಿದ 2 ಪ್ರತಿಗಳನ್ನು ಅಭ್ಯರ್ಥಿಯು ತನ್ನ ಬಳಿ ಕಾಯ್ದಿರಿಸಿಕೊಳ್ಳುವುದು. ಅದರಲ್ಲಿ ಸಂಸ್ಥೆಯ ಪ್ರತಿಯನ್ನು ಮೂಲ ದಾಖಲಾತಿಗಳ ಪರಿಶೀಲನೆಯ ಸಂದರ್ಭದಲ್ಲಿ ಹಾಜರುಪಡಿಸುವುದು.

| ವರ್ಗ/ಗುಂಪಿಗೆ ಸಂಬಂಧಪಟ್ಟ ಅಭ್ಯರ್ಥಿಗಳು | ಅರ್ಜಿ ಶುಲ್ಕ |
|---|---|
| ಅ) ಪ.ಜಾ./ಪ.ಪಂ/ವರ್ಗ–1/ಮಾ.ಸೈ. ಮತ್ತು ಆಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | ₹ 150–00<br>(ಬ್ಯಾಂಕ್ ಶುಲ್ಕ ಹೊರತುಪಡಿಸಿ) |
| ಆ) ವರ್ಗ:2ಎ/2ಬಿ/3ಎ/3ಬಿ/ಸಾಮಾನ್ಯ | ₹ 300–00<br>(ಬ್ಯಾಂಕ್ ಶುಲ್ಕ ಹೊರತುಪಡಿಸಿ) |

ನಿಗದಿಪಡಿಸಿದ ಬ್ಯಾಂಕ್/ ಬ್ಯಾಂಕಿನ ಶಾಖೆಗಳಲ್ಲಿ ಬ್ಯಾಂಕ್ ವ್ಯವಹಾರದ ವೇಳೆಯಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು. ಇವುಗಳನ್ನು ಹೊರತುಪಡಿಸಿ ಇತರೇ ಬ್ಯಾಂಕ್ / ಬ್ಯಾಂಕಿನ ಶಾಖೆಗಳಲ್ಲಿ ಶುಲ್ಕ ಸಂದಾಯ ಮಾಡಿದ್ದಲ್ಲಿ

ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಶುಲ್ಕ ಪಾವತಿಸಲು ನಿಗದಿಪಡಿಸಿದ ಕಾರ್ಪೋರೇಶನ್ ಬ್ಯಾಂಕಿನ ಯಾದಿಯನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿರುತ್ತದೆ. ಇದನ್ನು ಗಮನಿಸಿ ಅಭ್ಯರ್ಥಿಯು ತಮ್ಮ ಸಮೀಪದ ಕಾರ್ಪೋರೇಶನ್ ಬ್ಯಾಂಕಿನಲ್ಲಿ ಮಾತ್ರ ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸುವುದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ. ಅರ್ಜಿ ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ನಿಗದಿಪಡಿಸಿದ ಕೊನೆಯ ದಿನಾಂಕ 16–12–2010 ರ ಒಳಗಾಗಿ ಅರ್ಜಿ ಶುಲ್ಕವನ್ನು ತುಂಬಬೇಕಾಗಿರವುದರಿಂದ ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ತುಂಬದೇ ಇದ್ದಲ್ಲಿ ಅವರ ಅರ್ಜಿಯು ತಿರಸ್ಕೃತಗೊಳ್ಳುತ್ತದೆ. ಸಂಸ್ಥೆಯು ನಿಗದಿಪಡಿಸಿದ ಮುದ್ರಿತ ಚಲನ್ ಹೊರತುಪಡಿಸಿ ಇನ್ನುಳಿದ ಯಾವುದೇ ರೀತಿಯಲ್ಲಿ ಅಂದರೆ ಡಿ.ಡಿ / ಐ.ಪಿ.ಓ / ಚೆಕ್ ಇತ್ಯಾದಿಗಳ ಮೂಲಕ ಸಲ್ಲಿಸಿದ ಅರ್ಜಿ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ. ಇಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

15. ಇತರೆ ಸೂಚನೆಗಳು :

- ಭರ್ತಿ ಮಾಡಿದ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಮುನ್ನ ಸೂಚನೆಗಳನ್ನು ತಪ್ಪದೇ ಓದಿಕೊಂಡು ಒಪ್ಪಿಕೊಂಡಿರಬೇಕು.
- ಅರ್ಜಿಯನ್ನು ಸಂರಕ್ಷಿಸಿದ ನಂತರ ಕಂಪ್ಯೂಟರ್‌ನಲ್ಲಿ ನೀಡುವ ನೊಂದಣಿ ಸಂಖ್ಯೆಯನ್ನು ತಪ್ಪದೇ ಬರೆದಿಟ್ಟುಕೊಳ್ಳುವುದು.
- ಅಭ್ಯರ್ಥಿಗಳ ಮಾಹಿತಿಗಾಗಿ ಅರ್ಜಿ ಸಲ್ಲಿಸಿದ ನಂತರ ಅದರ ಒಂದು ಪ್ರತಿಯನ್ನು ತಪ್ಪದೇ ಪ್ರಿಂಟ್ ತೆಗೆದುಕೊಳ್ಳುವುದು.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ನೊಂದಣಿ ಸಂಖ್ಯೆಯು ನಮೂದಿತವಾಗಿರುವುದೇ ಎನ್ನುವುದನ್ನು ಮನವರಿಕೆ ಮಾಡಿಕೊಳ್ಳುವುದು.
- ಅಪೂರ್ಣ, ಸುಳ್ಳು ಮಾಹಿತಿ , ನಿಗದಿತ ಅರ್ಜಿ ಶುಲ್ಕಕ್ಕಿಂತ ಕಡಿಮೆ ಅರ್ಜಿ ಶುಲ್ಕ ಸಲ್ಲಿಸಿದ ಹಾಗೂ ಅರ್ಜಿ ಶುಲ್ಕ ಸಲ್ಲಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಂಗವಿಕಲ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.